# ಜೀವನ್ಮುಖಿ ಪಯಣದ ಕಾಪ್ತಾನ




■ ಪ್ರವೀಣ ಕುಲಕರ್ಣಿ

ಸಿಲ್ಕ್ಯಾರಾ ಸುರಂಗದ ಪಕ್ಕದಲ್ಲಿರುವ ಮಂದಿರದ ಮುಂದೆ ಮಂಡಿಯೂರಿ ತಲೆಬಾಗಿಸುವ ಮುನ್ನ ಆ ಅಜ್ಜ, ಸುರಂಗದೊಳಗೆ ಸಿಲುಕಿದವರು ಹೊರಬರುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿ, ಅವರ ಪಾಲಿಗೆ ದೇವರಾಗಿ ಕಂಗೊಳಿಸಿದ್ದರು. ಕಾರ್ಯಾಚರಣೆಯಲ್ಲಿ ತೊಡಗಿದವರ ಪಾಲಿಗೆ ಮಹಾನ್ ನಾಯಕನಾಗಿ ಹೋಗಿದ್ದರು. ಕೊನೆಗೂ ‘ಶುಭ ಸುದ್ದಿ’ ಕೊಟ್ಟ ಈ ಅಜ್ಜ ದೇಶದಾದ್ಯಂತ ಮನೆಮಾತಾಗಿದ್ದರು. ಕಾರ್ಮಿಕರೆಲ್ಲ ಸುರಕ್ಷಿತವಾಗಿ ಹೊರಬಂದಾಗ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಚರ್ಚೆಗೊಳಗಾಗಿದ್ದು ಕೂಡ ಈ ಅಜ್ಜನೇ. ಅಂದಹಾಗೆ, ಅವರ ಹೆಸರು ಅರ್ನಾಲ್ಡ್ ಡಿಕ್ಸ್ ಎಂದು.

ಈ ಅಜ್ಜನ ಘನತೆಯನ್ನು ಅರಿಯಲು ಜಾಲತಾಣದಲ್ಲಿ ಹರಿದಾಡಿದ ಈ ಒಂದು ಪೋಸ್ಟ್ ಸಾಕು: ‘ತಮ್ಮ ದೇಶವಲ್ಲ, ತಮ್ಮ ಜನರಲ್ಲ, ತಮ್ಮ ಕೆಲಸವೂ ಅಲ್ಲ. ಆದರೆ, ಆಸ್ಟ್ರೇಲಿಯಾದ ಅರ್ನಾಲ್ಡ್ ಡಿಕ್ಸ್ ಭಾರತಕ್ಕೆ ಧಾವಿಸಿ ಬಂದರು. ಹಗಲು–ರಾತ್ರಿ ಎನ್ನದೆ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು. ಇಳಿವಯಸ್ಸಿನ ಯಾವ ಆಯಾಸವನ್ನೂ ಅವರು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಸುರಂಗದಲ್ಲಿ ಸಿಲುಕಿ ಹಾಕಿಕೊಂಡ ಕಾರ್ಮಿಕರನ್ನು ತಮ್ಮ ಮಕ್ಕಳಂತೆ ಅವರು ಪರಿಭಾವಿಸಿದರು. ಎಲ್ಲರೊಂದಿಗೆ ಮಾತನಾಡುತ್ತಾ, ಎಲ್ಲರಲ್ಲೂ ವಿಶ್ವಾಸ ತುಂಬುತ್ತಾ ಕಾರ್ಯಾಚರಣೆ ಸುಗಮವಾಗಿ ನಡೆಯುವಂತೆ ನೋಡಿಕೊಂಡರು. ಸ್ಥಳೀಯರೊಂದಿಗೆ ಸೇರಿ ದೇವರ ಮುಂದೆ ಅವರು ಪ್ರಾರ್ಥನೆಯನ್ನು ಸಲ್ಲಿಸಿ, ಭಾವನಾತ್ಮಕವಾಗಿಯೂ ಜನರೊಂದಿಗೆ ನಿಂತರು. ಹೌದು, ಹೀರೊಗಳೆಂದರೆ ಹೀಗೆಯೇ; ಭಿನ್ನವಾಗಿರುತ್ತಾರೆ.’

ರಕ್ಷಣಾ ಕಾರ್ಯಾಚರಣೆ ತಾಣದಲ್ಲಿ ಡಿಕ್ಸ್ ಅವರ ಉಪಸ್ಥಿತಿ ಎಲ್ಲರ ಉತ್ಸಾಹವನ್ನು ಪುಟಿದೇಳುವಂತೆ ಮಾಡಿತ್ತು. ಭಗ್ನಾವಶೇಷಗಳಲ್ಲಿ ನಡೆದ ಜೀವನ್ಮುಖಿ ಪಯಣದ ಕಾಪ್ತಾನನಾಗಿದ್ದರು ಈ ಅಜ್ಜ. ಸುರಂಗದ ಆಸುಪಾಸಿನಲ್ಲಿದ್ದ ಯಾರನ್ನೂ ಡಿಕ್ಸ್ ಮಾತನಾಡಿಸದೆ ಬಿಡಲಿಲ್ಲ. ಒಳಗೆ ಸಿಲುಕಿದ್ದ ಕಾರ್ಮಿಕರಿಗೆ, ‘ನಿಮ್ಮನ್ನೆಲ್ಲ ಸುರಕ್ಷಿತವಾಗಿ ಹೊರಗೆ ಕರೆತರುವ ಹೊಣೆ ನಮ್ಮದು. ಡೋಂಟ್ ವರಿ. ಬೀ ರಿಲ್ಯಾಕ್ಸ್’ ಎಂದು ವಿಶ್ವಾಸ ತುಂಬುತ್ತಿದ್ದ ಅವರು, ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿಯಲ್ಲಿ ಉತ್ಸಾಹ ಬತ್ತದಂತೆ ಹುರಿದುಂಬಿಸುತ್ತಿದ್ದರು. ಪರ್ವತದ ‘ಮನೋಭಾವ’ ಅರಿತು ಕಾರ್ಯತಂತ್ರದಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆಗಳ ಕುರಿತು ತಿಳಿಹೇಳುತ್ತಿದ್ದರು. ತಮ್ಮ ಪ್ರೀತಿ ಪಾತ್ರರಾದವರು ಅಪಾಯದ ದವಡೆಗೆ ಸಿಲುಕಿದ್ದರಿಂದ ದುಗುಡದಿಂದ ಸುರಂಗದ ಮುಂದೆ ಕಾದಿದ್ದ ಕಾರ್ಮಿಕರ ಕುಟುಂಬದವರಿಗೂ ಅವರು ಭರವಸೆ ನೀಡುತ್ತಿದ್ದರು. ‘ಎಲ್ಲರೂ ಸುರಕ್ಷಿತವಾಗಿ ಬರುತ್ತಾರೆ. ಯೋಚಿಸಬೇಡಿ. ಆದರೆ, ತಾಳ್ಮೆ ಬೇಕು’ ಎನ್ನುತ್ತಿದ್ದರು.

ಪರ್ವತದ ಸಡಿಲ ಮಣ್ಣಿನ ಭೂಗುಣವನ್ನು ಬಹುಬೇಗ ಅರ್ಥ ಮಾಡಿಕೊಂಡ ಡಿಕ್ಸ್, ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲು ‘ಸಾವಧಾನ’ ಮಂತ್ರವೇ ಪ್ರಧಾನ ಎಂದು ತಿಳಿಹೇಳಿದ್ದರು. ‘ಪರ್ವತವು ವಿನೀತರಾಗಿರುವಂತೆ ನಮಗೆ ಬುದ್ಧಿವಾದ ಹೇಳುತ್ತಿದೆ. ತಾಳ್ಮೆಯಿಂದ ಮುಂದುವರಿಯುವಂತೆಯೂ ಸಂದೇಶ ನೀಡಿದೆ. ಅದನ್ನು ಕೇಳಿಸಿಕೊಳ್ಳದಿದ್ದರೆ ಒಳಗಿದ್ದವರಿಗೂ ಹೊರಗಿದ್ದವರಿಗೂ ಅಪಾಯ ಕಟ್ಟಿಟ್ಟ ಬುತ್ತಿ’ ಎಂದು ಎಚ್ಚರಿಸಿದ್ದರು. ಯಂತ್ರಗಳು ಸೋತು ನಿಂತಾಗ ಇಲಿ ಬಿಲ ತಂತ್ರದಿಂದ ಸುರಂಗ ಕೊರೆಯುವ ನಿಪುಣರನ್ನು ಕರೆಸಲು ಸಲಹೆ ನೀಡಿದ್ದು ಸಹ ಅವರೇ. ಎಷ್ಟೇ ಒತ್ತಡ ಬಂದರೂ ಪರ್ವತದ ಮೇಲೆ ಹೆಚ್ಚಿನ ಯಂತ್ರಗಳು ಹೋಗದಂತೆ, ಆತುರದಿಂದ ಸುರಂಗ ಕೊರೆಯಲು ಮುಂದಾಗದಂತೆ ತಡೆದದ್ದೂ ಇದೇ ಡಿಕ್ಸ್. ಭಾರತದ ಪಾಲಿಗೆ ಈಚಿನ ದಿನಗಳಲ್ಲಿ ಶುಭ ಸುದ್ದಿ ಕೊಟ್ಟ ಏಕೈಕ ಆಸ್ಟ್ರೇಲಿಯಾ ಪ್ರಜೆ ಇವರು! ಏಕೆಂದರೆ, ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ತಂಡ ಭಾರತವನ್ನು ಫೈನಲ್‌ನಲ್ಲಿ ಸೋಲಿಸಿ ಕಹಿ ಅನುಭವ ನೀಡಿತ್ತು.

ಜಿನಿವಾ ಮೂಲದ ಅಂತರರಾಷ್ಟ್ರೀಯ ಸುರಂಗ ಸಂಸ್ಥೆಯ ಮುಖ್ಯಸ್ಥರಾಗಿರುವ ಡಿಕ್ಸ್, ಒಬ್ಬ ಭೂಗರ್ಭಶಾಸ್ತ್ರಜ್ಞ, ಸುರಂಗತಜ್ಞ, ಎಂಜಿನಿಯರ್. ಅಷ್ಟೇ ಅಲ್ಲ, ವಕೀಲ ಕೂಡ ಹೌದು. ದೊಡ್ಡ ದೊಡ್ಡ ಯೋಜನೆಗಳ ಕುರಿತು ನೈತಿಕ, ಕಾನೂನಾತ್ಮಕ, ಪ್ರಾಕೃತಿಕ ಅಂಶಗಳನ್ನು ಮುಂದಿಟ್ಟುಕೊಂಡು ಪ್ರಶ್ನೆ ಮಾಡಿದವರು ಅವರು. ವಿಜ್ಞಾನ ಮತ್ತು ಕಾನೂನು ಎರಡೂ ವಿಷಯಗಳಲ್ಲಿ ಪದವಿ ಪಡೆದಿರುವ ಅವರು, ಜಗತ್ತಿನ ಹಲವು ದೇಶಗಳಲ್ಲಿ ಭೂಗತ ನಿರ್ಮಾಣ ಯೋಜನೆಗಳ ಕುರಿತು ಸಲಹೆಗಳನ್ನು ನೀಡಿದವರು.

‘ಈ ಪರ್ವತಶ್ರೇಣಿ ಸಾವಿರಾರು ವರ್ಷಗಳಷ್ಟು ಹಿಂದಿನ ಒಂದು ಮಹಾಕಾವ್ಯದಂತೆ ನನಗೆ ಭಾಸವಾಗುತ್ತಿದೆ. ನಾವೆಲ್ಲ ಅಷ್ಟೊಂದು ಯಂತ್ರಗಳೊಂದಿಗೆ ಇಲ್ಲಿ ಜಮಾಯಿಸಿದ್ದರೂ ಎಲ್ಲವನ್ನೂ ನಿಯಂತ್ರಿಸುತ್ತಿರುವುದು ಪರ್ವತವೇ. 41 ಶ್ರೇಷ್ಠ ಕಾರ್ಮಿಕರನ್ನು ಅದು ತನ್ನ ಒಡಲಲ್ಲಿ ಇರಿಸಿಕೊಂಡಿದೆ. ಆದರೆ, ಅವರಿಗೆ ಯಾವುದೇ ಅಪಾಯವಾಗಲು ಬಿಟ್ಟಿಲ್ಲ. ಅವರನ್ನು ಬೆಚ್ಚಗೆ ಇಟ್ಟುಕೊಂಡಿದೆ. ಅವರಿಗೆ ಊಟ ನೀಡಲು ಅಗತ್ಯವಾದ ಪೈಪ್ ಅಳವಡಿಕೆಗೂ ಅವಕಾಶ ನೀಡಿದೆ. ತುರ್ತು ಸೇವೆಗಳನ್ನು ನೀಡಲು ಅಡೆತಡೆ ಮಾಡಿಲ್ಲ. ಅದು ಅನುಮತಿಸಿದಾಗ ಮಾತ್ರ ನಾವು ಕಾರ್ಮಿಕರನ್ನು ಹೊರಗೆ ಕರೆತರಲು ಸಾಧ್ಯ. ಏನೇ ಆದರೂ ಕ್ರಿಸ್‌ಮಸ್ ಅನ್ನು ಅವರು ತಮ್ಮ ಮನೆಗಳಲ್ಲಿ ಆಚರಿಸುತ್ತಾರೆ ಎಂಬ ಭರವಸೆಯನ್ನು ಕೊಡಬಲ್ಲೆ’ ಎಂದು ಈ ಅಜ್ಜ ಹೇಳಿದ್ದರು. ಕಾರ್ಮಿಕರನ್ನು ಬೇಗ ಹೊರಗೆ ಕರೆತರುವ ಧಾವಂತ ಬೇಡ. ನಮಗೆ ಸಾಕಷ್ಟು ತಾಳ್ಮೆ ಬೇಕು ಎನ್ನುವುದನ್ನು ಅವರು ಒತ್ತಿ ಹೇಳಿದ್ದರು. ಪ್ರತಿಕೂಲ ಸನ್ನಿವೇಶದಲ್ಲೂ ಅವರದೊಂದು ಹಸನ್ಮುಖ ಕಾರ್ಯಾಚರಣೆಯಲ್ಲಿ ಅಸಾಧ್ಯವಾಗಿದ್ದನ್ನು ಸಾಧ್ಯವಾಗಿಸಲು ನೆರವಿಗೆ ಬಂತು. ಡಿಕ್ಸ್, ತಮ್ಮ ನಡೆಯ ಮೂಲಕ ಎಲ್ಲರಿಗೂ ವಿನಯದ, ತಾಳ್ಮೆಯ ಪಾಠ ಹೇಳಿದ್ದರು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65